# ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ

# ಸಿ ಸಿ - 884/2022

ದಿನಾಂಕಃ 16.03.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಪದ್ಮನಾಬನ್ ಕೃಷ್ಣನ್ |
| ತಂದೆಯ ಹೆಸರು | : | ಟಿ.ಎಸ್ ಕೃಷ್ಣನ್ |
| ವಯಸ್ಸು | : | 68 ವರ್ಷ |
| ಉದ್ಯೋಗ | : | ಬಿಜಿನೆಸ್ |
| ವಾಸಸ್ಥಳ | : | ಬೆಂಗಳೂರು |

## ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ

ಚಾ.ಸಾ 1 ಮತ್ತು 10 ರವರ ಪರಿಚಯ ನನಗೆ ಇರುವುದಿಲ್ಲ.

ದಿಃ 24.02.2022 ರಂದು ಬೆಳಿಗ್ಗೆ 11-45 ಗಂಟೆಗೆ ಹಂಪಿಯಿಂದ ಚಿತ್ರದುರ್ಗದ ಕಡೆ ಕಾರ್ ನೊಂದಣಿ ಸಂಖ್ಯೆಃ ಕೆಎ-03/ಎನ್.ಎಲ್-1084 ನೇದ್ದರಲ್ಲಿ 4 ಜನ ಬರುತ್ತಿರುವಾಗ ಒಬ್ಬ ವ್ಯಕ್ತಿಯು ತಕ್ಷಣ ದ್ವಿಚಕ್ರ ವಾಹನದಲ್ಲಿ ರಸ್ತೆ ದಾಡಿದ ಕಾರಣ ಸದರಿ ಅಪಘಾತವಾಗಿರುತ್ತದೆ. ನಮಗೆ ಯಾವುದೇ ರೀತಿಯ ಗಾಯಗಳು ಆಗಿರುವುದಿಲ್ಲ ಆದರೆ ಕಾರ್ ಜಖಂ ಆಗಿರುತ್ತದೆ. ಟಿ.ವಿ.ಎಸ್ ಎಕ್ಸ್ ಎಲ್ ಸೂಪರ್ ವಾಹನ ನಂಃ ಕೆಎ-35/ಇ.ಕೆ-3722 ನೇದ್ದು ಸಹ ಜಖಂ ಆಗಿರುತ್ತದೆ. ಸದರಿ ದ್ವಿಚಕ್ರ ವಾಹನವನ್ನು ಶಿವಪ್ರಸಾದ್ ಎನ್ನುವವರು ಚಾಲನೆ ಮಾಡುತ್ತಿದ್ದರು ಎಂದು ನಾನು ತಿಳಿದುಕೊಂಡಿರುತ್ತೇನೆ. ಸದರಿ ಅಪಘಾತವು ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಾನು ಪೊಲೀಸರ ಮುಂದೆ ಈ ಸಂಬಂಧವಾಗಿ ಹೇಳಿಕೆ ನೀಡಿರುತ್ತೇನೆ.

(ಸ.ಸ.ಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಲಾಯಿತು ಹಾಗೂ ಸ.ಸ.ಅ ರವರ ಕೋರಿಕೆಯಂತೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು ಸ.ಸ.ಅ ರವರಿಂದಃ</u>**

ದಿಃ 03.03.2022 ರಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

ನನ್ನ ಹೇಳಿಕೆಯಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿ. ಕಾರ್ ಚಾಲಕನ ತಪ್ಪಿನಿಂದ ಸದರಿ ಅಪಘಾತವಾಗಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**